# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** ದಿನಾಂಕ: 11.08.2020

**ಘನತ್ಯಾಜ್ಯ ಸಂಸ್ಕರಣಾ ಘಟಕಗಳಲ್ಲಿರುವ ಸಾವಯವ ಗೊಬ್ಬರವನ್ನು ರೈತರು ಉಚಿತವಾಗಿ ಪಡೆಯುವ ಕುರಿತು:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 07 ಘನತ್ಯಾಜ್ಯ ಸಂಸ್ಕರಣಾ ಘಟಕಗಳಲ್ಲಿ ಪ್ರತಿದಿನ ಸ್ವೀಕರಿಸುವ ವಿಂಗಡಿಸಿದ ಹಸಿ-ತ್ಯಾಜ್ಯವನ್ನು ವಿಂಡೋ ವಿಧಾನದಲ್ಲಿ ಸಂಸ್ಕರಿಸಿ, ನಂತರ 35mm & 16mm ಅಳತೆ ಜಾಲಿಯ ಟ್ರೋಮೆಲ್‌ಗಳಲ್ಲಿ ಜರಡಿಯಾಗಿ ಉಪ - ಉತ್ಪನ್ನವಾಗಿ ಹೊರಬರುವ (+) 35mm & (+) 16mm ಅಳತೆಯ ಎರಡನೇ ದರ್ಜೆಯ ಕಾಂಪೋಸ್ಟ್ ಅನ್ನು ರೈತರಿಗೆ ಉಚಿತವಾಗಿ ನೀಡುವ ಮುಖಾಂತರ ಮತ್ತು ರೈತರು ಇದನ್ನು ತೆಂಗು, ಅಡಿಕೆ, ಮಾವು, ಸೀಬೆ, ದಾಳಿಂಬೆ ಮತ್ತು ಇನ್ನಿತರೆ ತೋಟಗಾರಿಕೆ ಬೆಳೆಗಳಿಗೆ ಗೊಬ್ಬರವಾಗಿ ನೀಡಿದಲ್ಲಿ ಉತ್ತಮವಾದ ಬೆಳೆ ಪಡೆಯುವುದರೊಂದಿಗೆ ನೆಲದ ಫಲವತ್ತತೆ ಕೂಡ ವೃದ್ಧಿಯಾಗುವುದೆಂದು ತಜ್ಞರು ಅಭಿಪ್ರಾಯಿಸಿರುತ್ತಾರೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಘಟಕಗಳಲ್ಲಿ ರೈತರಿಗೆ ಉಚಿತವಾಗಿ ನೀಡಲು ನಿರ್ಧರಿಸಿರುವ 35mm ಅಳತೆಯ ಸಾವಯವ ಗೊಬ್ಬರವನ್ನು ರೈತರು ತಮ್ಮ - ತಮ್ಮ ಲಾರಿ/ಟ್ರಾಕ್ಟರ್ ವ್ಯವಸ್ಥೆಯೊಂದಿಗೆ ಹತ್ತಿರದ ಘಟಕಕ್ಕೆ ತೆರಳಿ ಉಚಿತವಾಗಿ ಗೊಬ್ಬರ ಪಡೆದುಕೊಂಡು ತೋಟಗಾರಿಕೆ ಬೆಳೆಗಳಿಗೆ ಗೊಬ್ಬರವಾಗಿ ನೀಡಿ ಉತ್ತಮವಾದ ಬೆಳೆ ಪಡೆಯುವುದರೊಂದಿಗೆ ನೆಲದ ಫಲವತ್ತತೆಯನ್ನು ಕೂಡ ವೃದ್ಧಿಯಾಗಲಿದೆ.(ಹೆಚ್ಚಿನ ಮಾಹಿತಿಗಾಗಿ ಸಾರ್ವಜನಿಕ ಪ್ರಕಟಣೆ ಪ್ರತಿಯನ್ನು ಲಗತ್ತಿಸಿದೆ)

**ಈ ಮೇಲ್ಕಂಡ ವಿಷಯವನ್ನು ತಮ್ಮ ಮಾಧ್ಯಮದಲ್ಲಿ ಪ್ರಚುರಪಡಿಸಲು ಕೋರಿದೆ.**

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ಆಯುಕ್ತರು-ದಾಸರಹಳ್ಳಿ ವಲಯ ರವರ ಕಛೇರಿ, ಹೆಸರುಘಟ್ಟ ಮುಖ್ಯ ರಸ್ತೆ, ಎಂ.ಇ.ಐ ಬಡಾವಣೆ, ಬಾಗಲಗುಂಟೆ, ಬೆಂಗಳೂರು-560 073.

ಸಂಖ್ಯೆ: ಅ.ಅ./ದಾ.ವ/ಪಿ.ಆರ್/432/2020-21 ದಿನಾಂಕ: 05.07.2020

## ಸಾರ್ವಜನಿಕ ಪ್ರಕಟಣೆ

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 07-ಘನತ್ಯಾಜ್ಯ ಸಂಸ್ಕರಣಾ ಘಟಕಗಳಲ್ಲಿರುವ 35mm ಅಳತೆಯ ಸಾವಯವ ಗೊಬ್ಬರವನ್ನು ತೋಟಗಾರಿಕೆ ಬೆಳೆಗಳಿಗೆ ರೈತರು ಉಚಿತವಾಗಿ ಪಡೆಯುವ ಕುರಿತು**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 07-ಘನತ್ಯಾಜ್ಯ ಸಂಸ್ಕರಣಾ ಘಟಕಗಳಲ್ಲಿ ಪ್ರತಿದಿನ ಸ್ವೀಕರಿಸುವ ವಿಂಗಡಿಸಿದ ಹಸಿ-ತ್ಯಾಜ್ಯವನ್ನು ವಿಂಡ್ರೋ ವಿಧಾನದಲ್ಲಿ ಸಂಸ್ಕರಿಸಿ, ನಂತರ 35mm & 16mm ಅಳತೆ ಜಾಲಿಯ ಟ್ರೋಮೆಲ್‌ಗಳಲ್ಲಿ ಜರಡಿಯಾಗಿ ಉಪ-ಉತ್ಪನ್ನವಾಗಿ ಹೊರಬರುವ (+)35mm & (+)16mm ಅಳತೆಯ ಎರಡನೇ ದರ್ಜೆಯ ಕಾಂಪೋಸ್ಟ್ ಅನ್ನು ರೈತರಿಗೆ ಉಚಿತವಾಗಿ ನೀಡುವ ಮುಖಾಂತರ ಮತ್ತು ರೈತರು ಇದನ್ನು ತೆಂಗು, ಅಡಿಕೆ, ಮಾವು, ಸೀಬೆ, ದಾಳಿಂಬೆ ಮತ್ತು ಇನ್ನಿತರೆ ತೋಟಗಾರಿಕೆ ಬೆಳೆಗಳಿಗೆ ಗೊಬ್ಬರವಾಗಿ ನೀಡಿದಲ್ಲಿ ಉತ್ತಮವಾದ ಬೆಳೆ ಪಡೆಯುವುದರೊಂದಿಗೆ ನೆಲದ ಫಲವತ್ತತೆ ಕೂಡ ವೃದ್ಧಿಯಾಗುವುದೆಂದು ತಜ್ಞರು ಅಭಿಪ್ರಾಯಿಸಿರುತ್ತಾರೆ.

ಆದ್ದರಿಂದ, ಘಟಕದಲ್ಲಿ ರೈತರಿಗೆ ಉಚಿತವಾಗಿ ನೀಡಲು ನಿರ್ಧರಿಸಿರುವ 35mm ಅಳತೆಯ ಸಾವಯವ ಗೊಬ್ಬರವನ್ನು ರೈತರು ತಮ್ಮ-ತಮ್ಮ ಲಾರಿ/ಟ್ರಾಕ್ಟರ್ ವ್ಯವಸ್ಥೆಯೊಂದಿಗೆ ಹತ್ತಿರದ ಘಟಕಕ್ಕೆ ಬಂದು ಉಚಿತವಾಗಿ ಪಡೆದುಕೊಂಡು ತೋಟಗಾರಿಕೆ ಬೆಳೆಗಳಿಗೆ ಗೊಬ್ಬರವಾಗಿ ನೀಡಿ ಉತ್ತಮವಾದ ಬೆಳೆ ಪಡೆಯುವುದರೊಂದಿಗೆ ನೆಲದ ಫಲವತ್ತತೆಯನ್ನು ಕೂಡ ವೃದ್ಧಿಗೊಳಿಸಬೇಕಾಗಿ ವಿನಂತಿಸಿದೆ.

**ಸಾವಯವ ಗೊಬ್ಬರ ದೊರೆಯುವ ಘಟಕಗಳ ಸ್ಥಳಗಳು ಮತ್ತು ಸಂಪರ್ಕ;**

| ಕ್ರ.ಸಂ | ಘಟಕದ ಹೆಸರು & ವಿಳಾಸ | ಘಟಕ ವ್ಯವಸ್ಥಾಪಕರು & ಸಂಪರ್ಕ |
|---|---|---|
| 1. | ದೊಡ್ಡಬಿದರಕಲ್ಲು ಘಟಕ, ತುಮಕೂರು ರಸ್ತೆ. | ಲಕ್ಷ್ಮೀ - 9449654142 |
| 2. | ಕನ್ನಹಳ್ಳಿ ಘಟಕ, ಮಾಗಡಿ ರಸ್ತೆ. | ಚಂದನ - 8151938809 |
| 3. | ಸೀಗೆಹಳ್ಳಿ ಘಟಕ, ಮಾಗಡಿ ರಸ್ತೆ. | ಧನುಷ್ - 9535615590 |
| 4. | ಸುಬ್ಬರಾಯನಪಾಳ್ಯಘಟಕ, ಮೈಸೂರು ರಸ್ತೆ. | ಶ್ರವಣ್ - 8867050827 |
| 5. | ಲಿಂಗಧೀರನಹಳ್ಳಿ ಘಟಕ, ಮೈಸೂರು ರಸ್ತೆ. | ಗೌರಿ - 7353903360 |
| 6. | ಕೆಸಿಡಿಸಿ ಘಟಕ, ಹೊಸೂರು ರಸ್ತೆ. | 080-25730649/25732265 |
| 7. | ಚಿಕ್ಕನಾಗಮಂಗಲ ಘಟಕ, ಹೊಸೂರು ರಸ್ತೆ. | ಅರ್ಪಿತ: 8217603925 |

ಜಂಟಿ ಆಯುಕ್ತರು
ದಾಸರಹಳ್ಳಿ ವಲಯ, ಬಿಬಿಎಂಪಿ

Scanned with CamScanner